

ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ ಬಸ್ ಚಾಲಕ–ನಿರ್ವಾಹಕರ ಸಲ್ಲಾಪದ ಒಂದು ಕ್ಷಣ ಚಿತ್ರಗಳು: ಎಂ.ಎಸ್. ಮಂಜುನಾಥ್

ಜಿಜ್ಞಾಸೆಯನ್ನು ಅವರು ನುರಿತ ವೈದ್ಯರೊಂದಿಗೆ ಹಂಚಿಕೊಂಡಾಗ, ಆ ವೈದ್ಯರು ಬೆಟ್ಟು ಮಾಡಿದ್ದು ಪರಿಸರ ಮಾಲಿನ್ಯದತ್ತ. 'ನೀವು ಕೆಲಸ ಮಾಡುವ ಸ್ಥಳದಲ್ಲಿ ವಾಯು ಮಾಲಿನ್ಯ ಅಪಾಯಕರ ಮಟ್ಟದಲ್ಲಿದೆ' ಎಂದು ವೈದ್ಯರು ಅನಾರೋಗ್ಯಕ್ಕೆ ಕಾರಣ ನೀಡಿದರು. ಅಂದರೆ, ವಾಹನಗಳ ದಟ್ಟಣೆಯಿಂದ ಕಲುಷಿತಗೊಳ್ಳುತ್ತಿರುವ ಗಾಳಿ ನಮಗರಿವಿಲ್ಲದೆಯೇ ನಮ್ಮ ನರಮಂಡಲದ ಮೇಲೆ ಪರಿಣಾಮ ಬೀರುತ್ತಿದೆ ಎಂದಾಯಿತು.

### ಟ್ರಾಫಿಕ್ ಜಾಮ್ ಏಕೆ ಉಂಟಾಗುತ್ತದೆ?

ರಸ್ತೆಯ ಸಾಮರ್ಥ್ಯವನ್ನು ಮೀರಿದ ವಾಹನಗಳು ಸಂಚರಿಸತೊಡಗಿದಾಗ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ನಗರಪ್ರದೇಶಗಳಲ್ಲಿನ ಯೋಜನೆಯ ತಪ್ಪು ಲೆಕ್ಕಾಚಾರಗಳೂ ಟ್ರಾಫಿಕ್ ಜಾಮ್‌ಗೆ ಕಾರಣವಾಗಿರುತ್ತವೆ. ಬೆಂಗಳೂರಿನಂಥ ಊರುಗಳಲ್ಲಿ, ನಗರದ ಬೆಳವಣಿಗೆಯನ್ನು ಸರಿಯಾಗಿ ಅಂದಾಜು ಮಾಡದೆ ರೂಪುಗೊಂಡ ಪುಟ್ಟ ಪುಟ್ಟ ರಸ್ತೆಗಳು ಟ್ರಾಫಿಕ್ ಜಾಮ್‌ಗೆ ಕಾರಣವಾಗಿವೆ. ಇದರ ಜೊತೆಗೆ ನಗರಾಭಿವೃದ್ಧಿ ಸಂಸ್ಥೆಗಳ ಅಧಿಕಾರಿಗಳು ನಗರದ ಬೇಕಾಬಿಟ್ಟಿ ಬೆಳವಣಿಗೆಗೆ ಅವಕಾಶ ಕಲ್ಪಿಸಿರುವುದೂ ವಾಹನಗಳ ದಟ್ಟಣೆಯ ಸಮಸ್ಯೆಗೆ ಕಾರಣವಾಗಿದೆ.

ಸಂಚಾರ ನಿಯಮಗಳನ್ನು ಪಾಲಿಸದಿರುವ ಸಾರ್ವಜನಿಕರು ಕೂಡ ಟ್ರಾಫಿಕ್ ಜಾಮ್ ಸೃಷ್ಟಿಯಾಗಲು ಕಾರಣರಾಗುತ್ತಾರೆ. ಒಂದು ವಿಷಯವಂತೂ ಸ್ಪಷ್ಟ – ಯಾವುದೇ ಮಹಾನಗರದ ಬೆಳವಣಿಗೆಯ ಕವಲುರೂಪದಲ್ಲಿ ಟ್ರಾಫಿಕ್ ಜಾಮ್ ರೂಪುಗೊಳ್ಳುವುದು ಸಹಜ. ಸಾರ್ವಜನಿಕ ಸಾರಿಗೆ ಅಸಮರ್ಪಕವಾಗಿರುವ ಸಂದರ್ಭದಲ್ಲಿ ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಾಗುವುದು ಕೂಡ ವಾಹನ ದಟ್ಟಣೆ ಸಮಸ್ಯೆಗೆ ಕಾರಣವಾಗುತ್ತದೆ.

### ಟ್ರಾಫಿಕ್ ಜಾಮ್‌ನ ಅಡ್ಡ ಪರಿಣಾಮಗಳು

- ವಾಹನ ಚಾಲಕ ಹಾಗೂ ಪ್ರಯಾಣಿಕರ ದುಡಿಮೆಯ ಸಮಯ ವ್ಯರ್ಥವಾಗುತ್ತದೆ. ಈ ಅನುತ್ಪಾದಕ ಸಮಸ್ಯೆ ವೈಯಕ್ತಿಕ ಪ್ರಗತಿಯ ಜೊತೆಗೆ ದೇಶದ ಆರ್ಥಿಕ ಉತ್ಪಾದನೆಯ ಮೇಲೂ ದುಷ್ಪರಿಣಾಮ ಉಂಟುಮಾಡುತ್ತದೆ.
- ಅನಿರೀಕ್ಷಿತ ಟ್ರಾಫಿಕ್ ಜಾಮ್‌ನಿಂದಾಗಿ – ನಿಗದಿತ ಸಭೆಗಳು, ವ್ಯಾಪಾರ, ಶಾಲಾ ಕಾಲೇಜುಗಳ ತರಗತಿಗಳು, ಕಚೇರಿಗಳಲ್ಲಿನ ಕೆಲಸ ಕಾರ್ಯಗಳು ಏರುಪೇರಾಗಲು ಕಾರಣವಾಗುತ್ತದೆ.
- ಸಂಚಾರ ದಟ್ಟಣೆಯಿಂದಾಗಿ ವಾಹನಗಳು

